ಇಲಾಖೆ / ವಿಷಯ : DEPARTMENT / SUBJECT: ಮಾನ್ಯ [illegible]

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 10/03/2020

# ಮಾತೃಭಾಷೆಯಲ್ಲಿ ಕಾನೂನು ಕುರಿತು ಕೃತಿ ರಚಿಸಿ: ಕಾಗೇರಿ

## 'ಕಾನೂನು ಕನ್ನಡ ಪುಸ್ತಕ' ಲೋಕಾರ್ಪಣೆ




ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಕಾಸಸೌಧದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಕಾನೂನು ಕನ್ನಡ ಪುಸ್ತಕ' ಲೋಕಾರ್ಪಣೆ ಮಾಡಲಾಯಿತು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಕಾನೂನಿನ ಅರಿವು ಮತ್ತು ನೆರವು ಲಭಿಸಲು ಮಾತೃಭಾಷೆಯಲ್ಲಿ ಕಾನೂನು ಜಾಗೃತಿ ಮೂಡಿಸುವ ಕೃತಿಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಕಾನೂನು ಇಲಾಖೆ, ರಾಜ್ಯ ಕಾನೂನು ವಿಶ್ವವಿದ್ಯಾಲಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ಕಾನೂನು ಕನ್ನಡ ಪುಸ್ತಕ' ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾರ್ವಜನಿಕರಿಗೆ ಸಮರ್ಪಕವಾಗಿ ಕಾನೂನು ಶಿಕ್ಷಣ ಒದಗಿಸಲು ಇದು ಹೆಚ್ಚು ಉಪಯೋಗವಾಗಲಿದೆ. ಕಾನೂನಿನ ಅರಿವು ಮೂಡಿಸುವುದರೊಂದಿಗೆ ಮಾತೃಭಾಷೆ ಬೆಳವಣಿಗೆಗೂ ಇಂತಹ ವಿಷಯಾಧಾರಿತ ಪುಸ್ತಕಗಳು ಹೆಚ್ಚು ಸಹಕಾರಿಯಾಗಲಿದೆ. ವೈದ್ಯಕೀಯ, ಇಂಜಿನಿಯರಿಂಗ್ ಸೇರಿದಂತೆ ಇತರ ಕ್ಷೇತ್ರಗಳ ಪುಸ್ತಕಗಳು ಕೂಡ ಕನ್ನಡದಲ್ಲಿ ಬರುವಂತಾಗಬೇಕು ಎಂದು ಸಲಹೆ ನೀಡಿದರು.

ಮಾತೃಭಾಷೆ ಎಂಬುದು ಅಕ್ಷರಗಳ ಜೋಡಣೆಯಲ್ಲ, ಅದೊಂದು ಸಂಸ್ಕೃತಿಯ ಪ್ರತಿಬಿಂಬವಾಗಿದ್ದು, ಅಗಾಧವಾದ ಶಕ್ತಿ ಇದೆ. ನಮ್ಮ ಮಾತೃಭಾಷೆ ಕನ್ನಡವನ್ನು ಉಳಿಸಿ ಬೆಳೆಸಬೇಕಾದ ಜವಾಬ್ದಾರಿ ಎಲ್ಲರ ಮೇಲಿದೆ. ಮನೆಯಲ್ಲೂ ಕೂಡ ಮಾತೃಭಾಷೆ ಬಿಟ್ಟು ಬೇರೆ ಭಾಷೆ ಮಾತನಾಡುವ ಪರಿಸ್ಥಿತಿ ಕಾಣುವಂತಾಗಿದೆ ಎಂದು ವಿಷಾದಿಸಿದರು.

ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಮಾತನಾಡಿ ಕಾನೂನು ಪುಸ್ತಕಗಳು ಕನ್ನಡದಲ್ಲಿ ಇನ್ನೂ ಹೆಚ್ಚಾಗಿ ಹೊರಬರಬೇಕಿದೆ. ಕಾನೂನು ವಿವಿ ಕುಲಪತಿ ಡಾ.ಈಶ್ವರ್ ಭಟ್ ಅವರು ಕನ್ನಡದಲ್ಲಿ ಕಾನೂನು ಪುಸ್ತಕ ಪ್ರಕಟಿಸಿರುವುದು ಶ್ಲಾಘನೀಯ ಎಂದರು. ಪರಭಾಷಾ ವ್ಯಾಮೋಹ ಮಕ್ಕಳನ್ನು ಜ್ಞಾನವಂತರನ್ನಾಗಿ ಮಾಡುವುದಿಲ್ಲ, ಪರಭಾಷೆಗಳನ್ನು ಕಲಿತರೂ ಮಾತೃಭಾಷೆಯನ್ನು ಬಿಡಬಾರದು. ಅನ್ಯಭಾಷೆ ಅನುಕರಣೆ ಗುಲಾಮಗಿರಿಯ ಸಂಕೇತವಾಗಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಸಿ.ಟಿ.ರವಿ ಮಾತನಾಡಿ, ಕಾನೂನು, ವೈದ್ಯಕೀಯ ಸೇವೆಗಳು ಜನರಿಗೆ ಅರ್ಥವಾಗುವ ಭಾಷೆಯಲ್ಲಿರಬೇಕು. ವೈದ್ಯರು ನೀಡುವ ಔಷಧಿ ಚೀಟಿ ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ, ಹಾಗೆಯೇ ವಕೀಲರು ಏನು ವಾದ ಮಾಡಿದರು, ಕೋರ್ಟ್ ಏನು ತೀರ್ಪು ಕೊಟ್ಟಿತು ಎಂಬುದು ಕಕ್ಷಿದಾರರಿಗೆ ಅರ್ಥವಾಗುವುದಿಲ್ಲ. ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿರ ಕಾನೂನು ಮತ್ತು ವೈದ್ಯಕೀಯ ಕ್ಷೇತ್ರದ ಪುಸ್ತಕಗಳು ಮುದ್ರಿತವಾದರೆ ಎಲ್ಲರೂ ಅವುಗಳನ್ನು ಓದಿ ಅರಿತುಕೊಳ್ಳಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ರಾಜ್ಯ ಕಾನೂನು ವಿವಿ ಕುಲಪತಿ ಡಾ.ಪಿ. ಈಶ್ವರ್ ಭಟ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಸೇರಿದಂತೆ ಇತರರು ಉಪಸ್ಥಿತರಿದ್ದರು.